
# ವಿವೇಕಾನಂದರ ಧಾರ್ಮಿಕ, ಸಾಂಸ್ಕೃತಿಕ ರಾಷ್ಟ್ರೀಯ ಮನೋಭಾವನೆ

ಪದ್ಮಿನಿ ಕೆ.ಎಲ್.

## ಭಾಗ ೨



**ದೇಶಭಕ್ತಿ:** ಸ್ವಾಮಿ ವಿವೇಕಾನಂದರು ಭಾರತಕ್ಕೆ ಮಾತ್ರವಲ್ಲದೆ ಇಡೀ ವಿಶ್ವಕ್ಕೇ ಆಧ್ಯಾತ್ಮಿಕ ಮಾರ್ಗದರ್ಶಕರು. ಅವರದು ಗಗನದಷ್ಟು ವಿಸ್ತಾರ, ಸಮುದ್ರದಷ್ಟು ಆಳ, ಸ್ಫಟಿಕದಷ್ಟು ಪರಿಶುಭ್ರವಾದ ಬಹುಮುಖೀ ವ್ಯಕ್ತಿತ್ವ. ಅವರು ಭಾರತೀಯ ಪರಿಕಲ್ಪನೆಯ ಆಧ್ಯಾತ್ಮಿಕ-ಧಾರ್ಮಿಕ ಪರಮ ಗುರಿಯಾದ ಆನಂದಾನುಭವಕ್ಕೆ, ಭಾರತದ ಸನಾತನ ಸಂಸ್ಕೃತಿಗೆ ಆಧುನಿಕ ಪ್ರಾಪಂಚಿಕ ಜೀವನಕ್ಕೆ ಅನ್ವಯವಾಗುವ ಸಾಮಾಜಿಕ ಮತ್ತು ವೈಜ್ಞಾನಿಕ ಆಯಾಮವನ್ನು ಕೊಟ್ಟವರು. ಪಾಶ್ಚಾತ್ಯ ಜೀವನದ ಧೋರಣೆಗಳಿಗೂ ಭಾರತೀಯ ಜೀವನದ ನಿಲುವುಗಳಿಗೂ ಇರುವ ಅಗಾಧ ಅಂತರವನ್ನು, ಸಮಕಾಲೀನ ಬದುಕಿನ ಕೊರತೆಗಳನ್ನು ನಿವಾರಿಸಿಕೊಳ್ಳಲು ಭಾರತೀಯ ಜೀವನರೀತಿ ಹೇಗೆ ಮಾರ್ಗದರ್ಶಕವಾಗುತ್ತದೆ ಎಂಬುದನ್ನೂ ಸ್ಪಷ್ಟಪಡಿಸಿ, ಭಾರತೀಯತೆಯ ಹಿರಿಮೆಯನ್ನು ಎತ್ತಿಹಿಡಿದ ಪ್ರಪ್ರಥಮ ಭಾರತೀಯ ಆದರು. ದೇಶಭಕ್ತಿಯ ಪ್ರಮುಖ ರೂಪ ದೇಶದ ಪ್ರಸ್ತುತತೆಯನ್ನು ಎತ್ತಿಹಿಡಿಯುವುದು. ಸುಮ್ಮನೆ ಭಾರತವನ್ನು ಗಮನಿಸಿದಾಗ ಕಾಣುವುದು ತಮ್ಮದು ಎಂಬುದೆಲ್ಲವನ್ನೂ ಬದಿಗೆ ಸರಿಸಿ ವಿದೇಶೀಯರಿಗೆ ತಲೆ ಬಾಗಿದ ಪರಾಧೀನ ಜನರನ್ನು ಹೊಂದಿರುವ ದೇಶ. ಇಲ್ಲಿಯ ಜನರಿಗೆ ಸ್ವಂತಿಕೆ ಎಂಬುದು ಯಾವುದೂ ಇಲ್ಲ. ಅವರು ಎಲ್ಲ ರೀತಿಯಲ್ಲೂ ಕುಬ್ಜರು. ತಲೆಯೇ ಎತ್ತಲಾಗದಂಥ ಸ್ಥಿತಿಯಲ್ಲಿ ಇರುವ ಇವರನ್ನು ಕರುಣೆಯಿಂದ ಉದ್ಧರಿಸಬೇಕಾಗಿದೆ ಎಂದೆನ್ನಿಸುತ್ತದೆ. ಆದರೆ ಅವರ ಆಧ್ಯಾತ್ಮಿಕ ಔನ್ನತ್ಯ ಪ್ರದರ್ಶನದ ವಸ್ತು ಅಲ್ಲ. ಅವರಿಗೆ ಬಾಹ್ಯ ಸಂಪತ್ತು, ಸ್ಥಾನಮಾನ ಅಷ್ಟೊಂದು ಮುಖ್ಯವಾದದ್ದು ಅಲ್ಲ. ಅವರು ದೇವರು ಇಟ್ಟ ಹಾಗೆ ಇರುತ್ತೇವೆ ಎಂಬ ಭಕ್ತಿಭಾವದವರು. ವರ್ತಮಾನದ ತೊಂದರೆಗಳಿಗೆ ಹಿಂದಿನ ಜನ್ಮದ ಕರ್ಮ ಕಾರಣ ಎಂದು ವರ್ತಮಾನದ ಕಿರಿ ಕಿರಿಗಳನ್ನು ಸಹಿಸುವವರು. ಅವರ ಈ ಸಹಿಸುವಿಕೆಯೇ ಲಾಭ ಕೋರರು, ಸ್ವಾರ್ಥಿಗಳು, ಆಸೆಬುರುಕರು ಅವರ ಮೇಲೆ ದಬ್ಬಾಳಿಕೆ ನಡೆಸಲು ಅವಕಾಶ ಮಾಡಿಕೊಟ್ಟಿದೆ. ಇದನ್ನು ಅವರಿಗೆ ಮನಗಾಣಿಸಿಕೊಡುವುದು ಮತ್ತು ತಪ್ಪು ತಿಳುವಳಿಕೆ ಇರುವವರಿಗೆ ಅವರ ಗ್ರಹಿಕೆಯ ಮಿತಿಯನ್ನು ಅರ್ಥಮಾಡಿಸುವುದು ತಾವು ತಮ್ಮ ದೇಶಕ್ಕೆ ಕೊಡುವ ಅತ್ಯಗತ್ಯವಾದ ಕಾಣಿಕೆ ಎಂದು ವಿವೇಕಾನಂದರು ತಿಳಿದಿದ್ದರು.

ವಿವೇಕಾನಂದರು ಭಾರತೀಯರ ಜಾಗೃತಿಯನ್ನು ಆಮೂಲಾಗ್ರವಾಗಿ ಭಾವಿಸಿದವರಲ್ಲಿ ಪ್ರಪ್ರಥಮರು. ಭಾರತದಾದ್ಯಂತ ಓಡಾಡಿ ಎಲ್ಲ ಜನರೊಂದಿಗೆ ಬೆರೆತ ವಿವೇಕಾನಂದರು ಗಾಂಧೀಜಿಯಂತೆ ಭಾರತೀಯರ ಏಕತೆಗೆ ಒಂದು ಪ್ರತೀಕವಾದರು. ಎಲ್ಲಾ ಭಾರತೀಯರಲ್ಲಿ ಇದು ನಮ್ಮ ದೇಶ, ಇದು ನಮ್ಮ ಸಂಸ್ಕೃತಿ, ಇದು ನಮ್ಮ ಆಧ್ಯಾತ್ಮಿಕ ಪರಂಪರೆ ಎನ್ನುವ ಹೆಮ್ಮೆ, ಅಭಿಮಾನ ಹುಟ್ಟಿಸುವ ರಾಷ್ಟ್ರೀಯಭಾವವನ್ನು, ದೇಶಭಕ್ತಿಯನ್ನು ಜಾಗೃತಗೊಳಿಸಿದರು. ಸಾಂಸ್ಕೃತಿಕವಾಗಿ ಧಾರ್ಮಿಕವಾಗಿ ಒಂದೇ ಆಧಾರವನ್ನು ಹೊಂದಿದ್ದರೂ ವೃತ್ತಿ-ಸಾಮಾಜಿಕ ಜವಾಬ್ದಾರಿಗಳ ಹಾಗೂ ಕಾಲದೇಶಾತ್ಮಕ ಭಿನ್ನತೆಗಳನ್ನು ಅತಿಯಾಗಿ ಭಾವಿಸಿ ತಮ್ಮ ತಮ್ಮ ಮಧ್ಯೆ ತಡೆಗೋಡೆಗಳನ್ನು ನಿರ್ಮಿಸಿಕೊಂಡು ಒಂದು ರೀತಿಯ ದ್ವೀಪದಲ್ಲಿ ಭಾರತೀಯರು ಬದುಕುತ್ತಿರುವುದನ್ನು ಅವರು ಗುರುತಿಸಿದರು. ಈ ಭಿನ್ನತೆ ಪ್ರಾಸಂಗಿಕವಾದದ್ದು, ಸುಗಮ ಬದುಕಿಗೆ ಒಂದು ನಿರ್ದಿಷ್ಟತೆಯನ್ನು ಸೂಚಿಸುವಂತಹುದು, ಅದೇ ಪರಮ ಸತ್ಯವಲ್ಲ ಎಂಬುದನ್ನು ಮನಗಾಣಿಸಲು ಅವರು ಅದ್ವೈತ ವೇದಾಂತ ವನ್ನು ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಪ್ರತಿ ಪಾದಿಸಿ ಭಾರತೀಯರ ಏಕತೆಯನ್ನು, ತಾವೆಲ್ಲರೂ ಒಂದು ಎನ್ನುವ ರಾಷ್ಟ್ರೀಯ ಮನೋಭಾವನೆಯನ್ನು ಜನಮನದಲ್ಲಿ ಬಿತ್ತಿದರು.

ವಿವೇಕಾನಂದರು ತಮ್ಮನ್ನು ಭಾರತದ ಸ್ಥೂಲ-ಸೂಕ್ಷ್ಮರೂಪ ಎಂದು ಗುರುತಿಸಿಕೊಂಡಿದ್ದರು. ಭಾರತೀಯರಿಗೆ ನಿರ್ದಿಷ್ಟವಾದ ಘನತೆಯ ಸ್ಥಾನಮಾನಗಳನ್ನು ಕಲ್ಪಿಸಿಕೊಡುವ ಉದ್ದೇಶ ಅವರಿ

ಗಿತ್ತು. ಭಾರತೀಯರನ್ನು ಅರ್ಥಮಾಡಿಕೊಳ್ಳುವುದರ ಭಾಗವಾಗಿ ಅವರು ತಮ್ಮ ಸಶಕ್ತತೆಯ ಮತ್ತು ದುರ್ಬಲತೆಯ ಅಂಶಗಳಾವುವು ಎಂಬುದನ್ನು ಕಂಡುಕೊಂಡರು. ಭಾರತೀಯರಿಗೆ ಅಪಮಾನಕರ ಪರಿಸ್ಥಿತಿ ಒದಗಿ ಬಂದುದಕ್ಕೆ ಕಾರಣವನ್ನು ಬಡತನ ಮತ್ತು ಅರೆತಿಳುವಳಿಕೆ, ಹುಂಬತನದ ಅಹಂಕಾರ; ಅವರನ್ನು ತಮ್ಮ ಮೇಲ್ಗೈ ಪ್ರದರ್ಶನದ ಸರಕನ್ನಾಗಿ ಮಾಡಿಕೊಂಡ ವಿದೇಶೀಯರ ಮನಃಸ್ಥಿತಿ ಎಂದು ಅರ್ಥಮಾಡಿಕೊಂಡರು. ನಮ್ಮನ್ನು ತಾವು ಅದ್ವಿತೀಯರು ಎಂದು ಸಾರ್ವಭೌಮರಂತೆ ಆಳುತ್ತಿದ್ದ, ತಮ್ಮ ಆಳ್ವಿಕೆಯನ್ನು ನಮ್ಮ ಮೇಲೆ ಹೇರಿದ್ದ, ತಮ್ಮ ಸಂಸ್ಕೃತಿ ನಾಗರಿಕತೆಯನ್ನು ಬಲಾತ್ಕಾರವಾಗಿ ನಮ್ಮ ಬಾಯೊಳಗೆ ತುರುಕುತ್ತಿದ್ದ ಬ್ರಿಟಿಷರಿಗೂ, ಅಮೆರಿಕನ್ನರಿಗೂ ಮತ್ತು ಯೂರೋಪಿಯನ್ನರಿಗೂ ನಮ್ಮ ಬಗ್ಗೆ ಇದ್ದ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿ, ನಮ್ಮ ಬಗ್ಗೆ ಪ್ರೀತಿ ಅಭಿಮಾನಗಳಿಂದ ಒಡನಾಡುವಂತಹ ಭಕ್ತಿ ಎನ್ನಬಹುದಾದ ಗೌರವಾದರಗಳನ್ನು ಅವರಲ್ಲಿ ಮೂಡಿಸಿದ ಭಾರತೀಯ ಘನ ರಾಯಭಾರಿಯಾದರು.

ನಾಲ್ಕು ವರ್ಷಗಳ ಕಾಲ ಭಾರತದಾದ್ಯಂತ ಸಂಚರಿಸಿದ ವಿವೇಕಾನಂದರು ಮೂರು ಸಮಸ್ಯೆಗಳನ್ನು ಪ್ರಧಾನವಾಗಿ ಗುರುತಿಸಿದರು: ೧) ಜನಸಾಮಾನ್ಯರ, ಅದರಲ್ಲೂ ಕೆಳವರ್ಗದವರ ಹಾಗೂ ಎಲ್ಲಾ ವರ್ಗದ ಸ್ತ್ರೀಯರ ಪರಿಸ್ಥಿತಿ ಹೀನಾಯವಾಗಿರುವುದು. ೨) ಎಲ್ಲಾ ವರ್ಗದವರು ಮತ್ತು ಎಲ್ಲಾ ಧರ್ಮೀಯರು ಜೀವನೋತ್ಸಾಹವನ್ನು ಕಳೆದುಕೊಂಡಿರುವುದು. ಭಾರತೀಯರು ತಾವು ಪ್ರಪಂಚದ ಭಾಗ ಎಂಬುದನ್ನೇ ಮರೆತುಬಿಟ್ಟಿದ್ದರು. ಒಂದು ರೀತಿಯ ಕೋಶಾವಸ್ಥೆಯಲ್ಲಿದ್ದರು. ಬೇರೆ ದೇಶದವರು ಹೊಸ ರೀತಿಯ ಬದುಕಿಗೆ ತೆರೆದುಕೊಂಡಿದ್ದರೆ ಭಾರತೀಯರು ಇನ್ನೂ ಮಧ್ಯಕಾಲೀನ ಯುಗದಲ್ಲಿಯೇ ಇದ್ದರು. ೩) ಭಾರತೀಯರಿಗೆ ಶ್ರೇಷ್ಠವಾದ ಆಧ್ಯಾತ್ಮಿಕ-ಧಾರ್ಮಿಕ ಪರಂಪರೆಯ ಹಿನ್ನೆಲೆ ಇದ್ದರೂ ಅದು ಮುಸ್ಲಿಮರ ಮತ್ತು ಕ್ರೈಸ್ತರ ದಾಳಿಯಲ್ಲಿ ನೆಲಕಚ್ಚಿತ್ತು, ಉಸಿರಾಡುವುದೇ ಕಷ್ಟವಾಗಿತ್ತು. ಇದಕ್ಕೆಲ್ಲಾ ಪರಿಹಾರ ನಮ್ಮ ಪರಂಪರೆಯಲ್ಲಿಯೇ ಇರುವುದನ್ನು ವಿವೇಕಾನಂದರು ಕಂಡುಕೊಂಡರು. ನಮ್ಮ ಆಧ್ಯಾತ್ಮಿಕ ಪರಂಪರೆಯ ಸಾರವೇ ದೃಷ್ಟಿಯಂತೆ ಸೃಷ್ಟಿ; ನಾವು ಹೇಗೆ ಭಾವಿಸುತ್ತೇವೆಯೋ ಹಾಗೆ ನಮ್ಮ ವಾಸ್ತವತೆ ಇರುತ್ತದೆ. ನಾವೇ ನಮ್ಮನ್ನು ಮೇಲಕ್ಕೆತ್ತಿ ನಿಲ್ಲಿಸಿಕೊಳ್ಳಬೇಕು, ಅದಕ್ಕೆ ಪೂರಕವಾಗಿ ನಾವು ಮರೆತಿರುವ ನಮ್ಮ ದಿವ್ಯ ಪರಂಪರೆಯನ್ನು ಪ್ರಜ್ಞಾಪೂರ್ವಕವಾಗಿ ಅದರ ಶ್ರದ್ಧಾಪೂರ್ವಕ ಅಧ್ಯಯನದಿಂದ ನೆನಪಿಗೆ ತಂದುಕೊಳ್ಳಬೇಕು. ನಮ್ಮನ್ನು ನಾವೇ ಸಂಘಟಿಸಿಕೊಳ್ಳಬೇಕು ಎಂದು ವಿವೇಕಾನಂದರು ಯೋಚಿಸಿದರು.

ಆತ್ಮಾಭಿಮಾನದ ಕೊರತೆ ಇರುವುದೇ ಭಾರತೀಯರ ಬಡತನಕ್ಕೆ ಮೂಲಕಾರಣ ಎಂದು ಗ್ರಹಿಸಿದರು. ಪಾರಂಪರಿಕ ಸಾಂಸ್ಕೃತಿಕ ಆಧ್ಯಾತ್ಮಿಕ ಶ್ರೀಮಂತಿಕೆಯ ಭೂಗತ ನಿಧಿಯನ್ನು ಹೊರತೆಗೆದು ಎಲ್ಲರಿಗೂ ಅದನ್ನು ಸಂಪೂರ್ಣವಾಗಿ ತಲುಪಿಸಿ ಅವರಲ್ಲಿದ್ದ ಕ್ರಿಯಾಜಡತ್ವವನ್ನು, ನಿರಾಸೆಯ ಮಂದತ್ವವನ್ನು ಕಿತ್ತೊಗೆದರು. ಆಗ ಇದ್ದ ಬ್ರಿಟಿಷ್ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ಆರ್ಥಿಕ ಜೀವನ ಸೂತ್ರವಿಲ್ಲದ ಗಾಳಿಪಟದಂತಾಗಿತ್ತು. ಬ್ರಿಟಿಷ್ ವಿದ್ಯಾಭ್ಯಾಸವನ್ನು ಒಪ್ಪಿಕೊಂಡವರು ಸ್ವಲ್ಪಮಟ್ಟಿಗೆ ತಮ್ಮ ಬದುಕನ್ನು ಸುಲಲಿತವಾಗಿ ಸಾಗಿಸಬಹುದಾಗಿತ್ತು. ವಿವೇಕಾನಂದರು ಅದೇ ಶಿಕ್ಷಣ ಪದ್ಧತಿಯನ್ನು ಸಾಂಪ್ರದಾಯಿಕ ಕಸಬುದಾರಿಕೆಯೊಂದಿಗೆ, ಧಾರ್ಮಿಕ ನೈತಿಕತೆಯೊಂದಿಗೆ ಸಮೀಕರಿಸುವ ವ್ಯವಸ್ಥೆಯನ್ನು ರೂಪಿಸಿದರು. ಭಾರತೀಯರು ಸಮಕಾಲೀನವಾಗಿ ಬದುಕುವ ಸಾಧ್ಯತೆಯ ಮಾರ್ಗವನ್ನು ತೋರಿದರು.

ಜನಸಾಮಾನ್ಯರನ್ನು ನಿರ್ಲಕ್ಷಿಸಿರುವುದೇ ನಮ್ಮ ದೇಶದ ಹೀನಾಯಸ್ಥಿತಿಗೆ ಮುಖ್ಯಕಾರಣ ಎಂದು ತಿಳಿದಿದ್ದ ವಿವೇಕಾನಂದರು ಮೊದಲಿಗೆ ಶ್ರೀರಾಮಕೃಷ್ಣರ ನೇರ ಶಿಷ್ಯರನ್ನೆಲ್ಲಾ ಒಂದುಗೂಡಿಸಿ ಶ್ರೀರಾಮಕೃಷ್ಣ ಮಠದಲ್ಲಿ ಸಂನ್ಯಾಸಿಗಳಾಗಿ ಉಳಿಯುವ ವ್ಯವಸ್ಥೆ ಮಾಡಿದರು. ಭಾರತೀಯ ಯುವಕರನ್ನು ಭಾರತೀಯ ಅದ್ವೈತ ಪರಂಪರೆಯಲ್ಲಿ ಭಾರತೀಯರನ್ನು ಒಂದುಗೂಡಿಸಲು, ಸರ್ವಧರ್ಮ ಸಾಮರಸ್ಯತೆಯನ್ನು ಪ್ರತಿಪಾದಿಸಲು, ಜೀವನರೀತಿಯಲ್ಲಿ ಬೇರುಬಿಟ್ಟಿದ್ದ ಅಸಮಾನತೆ ಅನ್ಯಾಯ ಪಾರತಂತ್ರ್ಯ ಕೀಳರಿಮೆಗಳ ವಿರುದ್ಧ ಹೋರಾಡಲು, ರಾಜಕೀಯ ಆರ್ಥಿಕ ಆಧ್ಯಾತ್ಮಿಕವೇ ಮೊದಲಾದ ಮುಖಗಳಲ್ಲಿಯ ಸ್ವಾತಂತ್ರ್ಯವನ್ನು ವಾಸ್ತವವಾಗಿಸಲು ಪ್ರಾಮಾಣಿಕ ಶ್ರದ್ಧಾವಂತ ಪರಮ ತ್ಯಾಗಶೀಲ ಕಾರ್ಯಕರ್ತ್ರಗಳಾಗುವಂತೆ, ಸಮಾಜದ ಪುನರುದ್ಧಾರದ ನಾಯಕಮಣಿಗಳಾಗುವಂತೆ ಮನವೊಲಿಸಿದರು, ಸಾಂಸ್ಥಿಕವಾಗಿ ಸಂಘಟಿಸಿದರು. ಮತ್ತು ಜನಸಾಮಾನ್ಯರಲ್ಲಿ ನಮ್ಮ ಆಧ್ಯಾತ್ಮಿಕ ಸಾಂಸ್ಕೃತಿಕ ಪರಂಪರೆಯ ವಿಶಿಷ್ಟತೆಗಳ ಅರಿವನ್ನು ಮೂಡಿಸುವ, ಅವರಲ್ಲಿ ದೇಶಾಭಿಮಾನಪೂರ್ವಕ ಆತ್ಮಾಭಿಮಾನವನ್ನು, ಸ್ವಾವಲಂಬೀ ಮನೋಭಾವನೆಯನ್ನು ಎಚ್ಚರಿಸುವ ಕಾರ್ಯದಲ್ಲಿ ಅವರನ್ನು ತೊಡಗಿಸಿದರು.

**ಹೊಸ ಶಕೆ:** ದೇಶಭಕ್ತಿಯ ಒಂದು ರೂಪ ನಮ್ಮ ದೇಶದಲ್ಲಿರುವ ಎಲ್ಲ ಧರ್ಮೀಯರೂ ಪರಸ್ಪರ ಸೋದರ ಸೋದರಿಯರು ಎಂಬ ಬಾಂಧವ್ಯವನ್ನು ಪ್ರತಿಯೊಬ್ಬರೂ ತಂತಮ್ಮ ಋಜು ನಡಾವಳಿಯಲ್ಲಿ ಸ್ಥಾಪಿಸಿಕೊಳ್ಳುವುದು. ಈ ಬಾಂಧವ್ಯ ಮಾತ್ರ ನಮ್ಮ ದೇಶದ ಘನತೆಯನ್ನು ಎತ್ತಿಹಿಡಿಯುತ್ತದೆ, ದೇಶದೊಳಗೆ ಶಾಂತಿ ಸಮಾಧಾನಗಳು ನೆಲೆಯೂರುವಂತೆ ಮಾಡುತ್ತವೆ ಎಂದು ವಿವೇಕಾನಂದರು ದೇಶಸೇವೆಯ, ಧಾರ್ಮಿಕ-ಆಧ್ಯಾತ್ಮಿಕ ಜೀವನರೀತಿಯ ಒಂದು ಹೊಸ ಶಕೆಯನ್ನು ಆರಂಭಿಸಿದರು. ಶ್ರೀರಾಮಕೃಷ್ಣ ಮಠದಡಿಯಲ್ಲಿ ಸಂಘಟಿತರಾದ ಶ್ರೀರಾಮಕೃಷ್ಣರ ನೇರ ಸಂನ್ಯಾಸಿ ಶಿಷ್ಯರಿಗೆ ಇಡೀ ವಿಶ್ವವೇ ದೇವರ ಆವಾಸ ಸ್ಥಾನ; ಇನ್ನು ೫೦ ವರ್ಷಗಳ ಕಾಲ ದೇಶವೇ ನಮ್ಮ ದೇವರಾಗಿರಲಿ; ಎಲ್ಲಾ ಜೀವಿಗಳೂ ದೇವಾಲಯಗಳೇ ಆಗಿದ್ದರೂ ಮನುಷ್ಯನೇ ಅತ್ಯಂತ

ಹಿರಿದಾದ ದೇವಾಲಯ, ದೇವರನ್ನು ಅಲ್ಲಿಯೇ ಆರಾಧಿಸಬೇಕು; ಆ ಆರಾಧನೆಯಿಂದ ಮುಕ್ತಿ ಖಂಡಿತವಾಗಿ ದೊರೆಯುತ್ತದೆ, ಜೀವಂತ ದೇವರನ್ನು ಪೂಜಿಸುವುದೇ ನಿಜವಾದ ಪೂಜೆ ಎಂದು ಕರೆಕೊಟ್ಟರು. ಪ್ರತಿಯೊಬ್ಬ ಸಂನ್ಯಾಸಿಗೂ ಜನಸಾಮಾನ್ಯರಿಗೆ ಪ್ರಚಲಿತ ಆಧುನಿಕ ಶಿಕ್ಷಣ ದೊರಕಿಸಿಕೊಡುವ ಜವಾಬ್ದಾರಿಯನ್ನು ಕೊಟ್ಟರು. ವಿಜ್ಞಾನ ತಂತ್ರಜ್ಞಾನ ಮತ್ತು ಸಮಾಜವಿಜ್ಞಾನಗಳ ಕಲಿಕೆಗೆ, ಅದರ ಜೊತೆಗೆ ವ್ಯಕ್ತಿಯ ಅಪಾರವಾದ ಅಂತಶ್ಶಕ್ತಿಯನ್ನು ಜಾಗೃತಗೊಳಿಸುವ ಉಪನಿಷತ್ತುಗಳ ಬೋಧನೆಗೂ, ಸರ್ವ ಧರ್ಮಗಳ ಸಾಮರಸ್ಯತೆಗೂ ಆ ಶಿಕ್ಷಣ-ವ್ಯವಸ್ಥೆಯಲ್ಲಿ ಪ್ರಾಧಾನ್ಯತೆ ಕೊಟ್ಟರು. ಈ ಸಂನ್ಯಾಸಿಗಳ ಕಾರ್ಯಕ್ಕೆ ಕೈಗೂಡಿಸುವ ಶ್ರೀರಾಮಕೃಷ್ಣ ಗೃಹಸ್ಥ ಅನುಯಾಯಿಗಳನ್ನೆಲ್ಲಾ 'ಶ್ರೀ ರಾಮಕೃಷ್ಣ ಮಿಷನ್' ಎಂಬ ಸಂಸ್ಥೆಯಡಿ ಒಟ್ಟುಗೂಡಿಸಿದರು. ಈ ಎರಡೂ ಸಂಸ್ಥೆಗಳ ನೇತೃತ್ವದಲ್ಲಿ ವಿದ್ಯಾವಂತರಾದವರು ಸ್ವಾವಲಂಬಿಗಳಾಗಿ ಬದುಕುವ ಪರಿಣತಿಯನ್ನು ಪಡೆದರು. ಇವುಗಳ ಸದಸ್ಯರು ಶಾಲೆಗಳ ಜೊತೆಗೆ ಅನಾಥಾಲಯ, ಆಸ್ಪತ್ರೆ, ಸಂತ್ರಸ್ತರಿಗೆ ಪರ್ಯಾಯ ಪರಿಹಾರೋಪಾಯಗಳ ನಿರ್ವಹಣೆಯ ಜವಾಬ್ದಾರಿಯನ್ನೂ ನಿರ್ವಹಿಸಿದರು, ಹುಡುಗಿಯರಿಗಾಗಿಯೇ ವಿಶೇಷ ಶಾಲೆಯನ್ನು ಸ್ಥಾಪಿಸಿ ಪ್ರತ್ಯೇಕ ಶಿಕ್ಷಣ ವ್ಯವಸ್ಥೆಯನ್ನು ಅವರಿಗಾಗಿ ರೂಪಿಸಿದರು, ಜನಸೇವೆಯೇ ಜನಾರ್ದನಸೇವೆ ಎಂದು ದುಡಿದರು.

ಜನಸೇವೆಯೇ ಜನಾರ್ದನನ ಸೇವೆ ಎಂಬ ವಿವೇಕಾನಂದರ ಧ್ಯೇಯ ವಾಕ್ಯವು ಈ ಸಂಸ್ಥೆಗಳನ್ನು ಸಾಮಾಜಿಕ ಅಭಿವೃದ್ಧಿಯ ಹರಿಕಾರರನ್ನಾಗಿಸಿತು. ವ್ಯಷ್ಟಿಯಿಂದ ಸಮಷ್ಟಿಯ ಅಭಿವೃದ್ಧಿಯಾಗುವಂತೆ ಸಮಷ್ಟಿಯಿಂದ ವ್ಯಷ್ಟಿಯೂ ಆಗುತ್ತದೆ ಎನ್ನುವ ಹೊಸ ಸೇವಾಮಂತ್ರದ ದ್ರಷ್ಟಾರರಾದರು ವಿವೇಕಾನಂದರು. ಹಾಗೆಯೇ ಪ್ರಜಾಸತ್ತಾತ್ಮಕ ಮಾದರಿಯ ಸಂಸ್ಥೆಯ ಪರಿಕಲ್ಪನೆಯ ಜನ್ಮದಾತರೂ ಆದರು. ಹಿರಿದಾದುದನ್ನು ಪಡೆಯಲು ಕಿರಿದಾದುದನ್ನು ತ್ಯಾಗ ಮಾಡುವುದು, ಸುತ್ತಲಿನವರನ್ನು ದೈವದ ಪ್ರತಿರೂಪ ಎಂದು ತಿಳಿಯುವುದು ಬಹಳ ಸೂಕ್ತವಾದದ್ದು; ರಾಷ್ಟ್ರದ ಅಭಿವೃದ್ಧಿಯ ಕಾರ್ಯ ಯೋಜನೆಗಳ ಯಶಸ್ಸು ಅದರ ನಿರ್ವಾಹಕರ ನಿರ್ದೇಶಕರ ಉನ್ನತ ಮಟ್ಟದ ವ್ಯಕ್ತಿತ್ವವನ್ನು ಆಧರಿಸಿರುತ್ತದೆ; ವೈರಾಗ್ಯ ಮತ್ತು ಸೇವೆ ಭಾರತದ ಜೋಡಿ ಆದರ್ಶಗಳು ಎಂದು ಅವರು ಪದೇ ಪದೇ ಹೇಳುತ್ತಿದ್ದರು.

**ಉಪಸಂಹಾರ:** ವಿವೇಕಾನಂದರು ತಮ್ಮ ಕಾರ್ಯ ಕತ್ತಲನ್ನು ಕತ್ತಲು ಎಂದು ಗುರುತಿಸುವುದು ಕತ್ತಲನ್ನು ಹೊರದೂಡುವ ದೀಪವನ್ನು ಬೆಳಗುವುದು ಎಂದು ತಿಳಿದಿದ್ದರು. ''ಓ ಇಲ್ಲಿ ಕತ್ತಲೆ, ಕತ್ತಲೆ ಎಂದು ಎಷ್ಟು ಗಟ್ಟಿಯಾಗಿ ಎಷ್ಟು ಬಾರಿ ಅರಚಿಕೊಂಡರೂ ಕತ್ತಲೆ ಹೋಗುತ್ತದೆಯೆ? ಇದ್ದಂತೆಯೇ ಇರುತ್ತದೆ. ಅದೇ ಒಂದು ಸಣ್ಣ ಬೆಳಕಿನ ದೀಪವನ್ನು ತಂದರೂ ಕತ್ತಲೆ ಹಾರಿ ಹೋಗುತ್ತದೆ'' ಎನ್ನುತ್ತಿದ್ದರು. ಭಾರತ ಸ್ವತಂತ್ರವಾಗಬೇಕಾದರೆ ಅದು ಹೂತುಹೋಗಿರುವ ತನ್ನ ಆಧ್ಯಾತ್ಮಿಕ ನಿಧಿಯನ್ನು ಹೊರತೆಗೆದು ತನ್ನದಾಗಿಸಿಕೊಳ್ಳಬೇಕು; ಅದರ ಶಕ್ತಿ ಭೌತಿಕ ಸಂಪತ್ತಿನ ಆರ್ಜನೆಯಿಂದ ವೃದ್ಧಿಸುವುದಿಲ್ಲ; ಪ್ರೀತಿ ಶಾಂತಿಯ ಧ್ವಜವನ್ನು ಹಾರಿಸುವುದರಿಂದ ಶಕ್ತಿಸಂಪನ್ನರಾಗುತ್ತೇವೆಯೇ ವಿನಾ ಹಿಂಸೆ ರಕ್ತಪಾತಗಳಿಗೆ ಅವಕಾಶ ಕೊಡುವ ವಿಧ್ವಂಸಕ ಕೃತ್ಯಗಳಿಂದ ಅಲ್ಲ; ಭೌತಿಕ ಆಮೋದ ಪ್ರಮೋದಗಳನ್ನು ಅನುಭವಿಸುವ ಎಲ್ಲಾ ಸಾಮರ್ಥ್ಯ ಸಾಧ್ಯತೆಗಳಿದ್ದಾಗಲೂ ಅದೇ ಸಾರ್ಥಕ ಬದುಕು ಅಲ್ಲ ಎಂದು ಅವುಗಳನ್ನು ಬದಿಗಿರಿಸಿ ಬದುಕಿನ ಅತ್ಯಾವಶ್ಯಕ ಸಂಗತಿಗಳು ಎಲ್ಲರಿಗೂ ದೊರೆಯಲು ಪರಿಶ್ರಮಿಸುವುದೇ ಅರ್ಥಪೂರ್ಣವಾದದ್ದು ಎಂಬುದನ್ನು ಎಲ್ಲರೂ ಮನಗಾಣಬೇಕು ಎಂಬುದನ್ನು ಸಾರಿದ ಇಂಥ ಭಾರತೀಯ, ಆದರೆ ಜಗತ್ತಿನ ಪ್ರಪ್ರಥಮ ನಾಯಕ ೧೮ನೇ ಶತಮಾನದಲ್ಲಿ ಮೂಡಿ

## ಬುದ್ಧನ ವಾಣಿ

ಅಹಂಕಾರವಿರುವ ತನಕ ಎಲ್ಲ ಶರೀರ ದಂಡನೆಯೂ ವ್ಯರ್ಥ. ಪ್ರಾಪಂಚಿಕ ಅಥವಾ ಸ್ವರ್ಗದ ಸುಖಗಳ ಬಯಕೆಗಳು ವ್ಯಕ್ತಿಯನ್ನು ಕಾಡುತ್ತಿದ್ದರೆ, ತಪಸ್ಸಿನಿಂದ ಏನು ಸಾಧಿಸಿದಂತಾಯಿತು? ಆದರೆ ಯಾರಲ್ಲಿ ಅಹಂಕಾರ ನಾಶವಾಗಿದೆಯೋ, ಯಾರು ಕಾಮನೆಗಳಿಂದ ಮುಕ್ತನಾಗಿರುವನೋ ಅವನು ಈ ಜಗತ್ತಿನ ಅಥವಾ ಸ್ವರ್ಗದ ಸುಖಗಳನ್ನು ಬಯಸನು. ಶರೀರದ ಸ್ವಾಭಾವಿಕ ಬಯಕೆಗಳನ್ನು ಈಡೇರಿಸುವುದರಿಂದ ಅವನು ಮಲಿನಗೊಳ್ಳುವುದಿಲ್ಲ. ಶರೀರದ ಆವಶ್ಯಕತೆಗಳಿಗೆ ತಕ್ಕಂತೆ ಅವನು ತಿನ್ನಲಿ, ಕುಡಿಯಲಿ.

ನೀರು ಕಮಲದ ಸುತ್ತ ಇದ್ದರೂ, ಅದರ ದಳಗಳನ್ನು ತೋಯಿಸುವುದಿಲ್ಲ. ಇಂದ್ರಿಯಲೋಲುಪತೆಯ ಎಲ್ಲ ವಿಧಗಳೂ ದುರ್ಬಲಗೊಳಿಸುವ ಸಾಧನಗಳು. ಯಾರು ತನ್ನ ಇಂದ್ರಿಯಗಳ ಬಯಕೆಗಳ ದಾಸನಾಗಿರುತ್ತಾನೋ, ಸದಾ ಅವುಗಳ ತೃಪ್ತಿಗಾಗಿ ಪರದಾಡುತ್ತಿರುತ್ತಾನೋ ಅಂತಹವನ ಬಾಳು ತುಚ್ಛ ಹಾಗೂ ಅಸಭ್ಯ .

ಜೀವನಕ್ಕೆ ಬೇಕಾಗುವ ಆವಶ್ಯಕತೆಗಳನ್ನು ಮಾತ್ರ ಪೂರೈಸುವುದು ತಪ್ಪಲ್ಲ. ಶರೀರವನ್ನು ಆರೋಗ್ಯವಾಗಿಟ್ಟುಕೊಳ್ಳುವುದು ಕರ್ತವ್ಯ , ಇಲ್ಲದಿದ್ದರೆ ಜ್ಞಾನದ ಬತ್ತಿಯನ್ನು ಹೊಸೆಯುವ ಸಾಮರ್ಥ್ಯ ಇಲ್ಲವಾಗುತ್ತದೆ, ಮನಸ್ಸು ದೃಢವಾಗಿರದೆ ತಿಳಿಯಾದ ಆಲೋಚನೆಯೂ ಅಸಾಧ್ಯವಾಗುತ್ತದೆ.

ನಿಜವಾದ ಧರ್ಮದ ವಿಶಿಷ್ಟವಾದ ಲಕ್ಷಣವೆಂದರೆ, ಸದ್ಭಾವ, ಪ್ರೀತಿ, ಸತ್ಯನಿಷ್ಠೆ, ಪರಿಶುದ್ಧತೆ, ಉದಾತ್ತಚರಿತೆ ಹಾಗೂ ಕರುಣೆ. *('ಭಗವಾನ್ ಬುದ್ಧಸೂಕ್ತಿ' ಯಿಂದ)*